ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್

## ಸಂವಹನ ಮತ್ತು ಸಾಮರ್ಥ್ಯ ಅಭಿವೃದ್ಧಿ ಘಟಕ

ಸಂಖ್ಯೆ :RDPR/SWSM/NBA/CEO-14/2013-14/1368 ದಿನಾಂಕ:28.10.2013

**ರವರಿಗೆ,**

**ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು**
**ಎಲ್ಲಾ ಜಿಲ್ಲಾ ಪಂಚಾಯತ್.**

**ಮಾನ್ಯರೆ,**

**ವಿಷಯ:** ನಿರ್ಮಲ ಭಾರತ್ ಅಭಿಯಾನ ಕಾರ್ಯಕ್ರಮದಡಿ ಕಾರ್ಯನಿರ್ವಹಿಸುತ್ತಿರುವ ಸಮಾಲೋಚಕರಿಗೆ ಜಿಲ್ಲೆಯಲ್ಲಿ ನಿಗಧಿಪಡಿಸಿರುವ ಜಬಾಬ್ದಾರಿ ಮತ್ತು ಗುರಿಯ ಮಾಹಿತಿ ನೀಡುವ ಕುರಿತು

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಕೇಂದ್ರ ನಿರು ಮತ್ತು ನೈರ್ಮಲ್ಯ ಮಂತ್ರಾಲಯದ ಮಾರ್ಗಸೂಚಿಯಂತೆ, ಜಿಲ್ಲೆಯಲ್ಲಿ ನಿರ್ಮಲ ಭಾರತ್ ಅಭಿಯಾನ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಟಾನ ಮಾಡಲು 3 ಜನ ಜಿಲ್ಲಾ ಸಮಾಲೋಚಕರನ್ನು ನೇಮಕ ಮಾಡಿಕೊಳ್ಳಲು ಅವಕಾಶವಿರುತ್ತದೆ.ಅದರಂತೆ ಕೆಲವೊಂದು ಜಿಲ್ಲೆಗಳನ್ನು ಹೊರತುಪಡಿಸಿ, ಎಲ್ಲಾ ಜಿಲ್ಲೆಗಳಲ್ಲಿ ಮೂರು ಮಂದಿ ಸಮಾಲೋಚಕರನ್ನು ನೇಮಕ ಮಾಡಿಕೊಳ್ಳಲಾಗಿರುತ್ತದೆ.

ನಿರ್ಮಲ ಭಾರತ್ ಅಭಿಯಾನವು ಬೇಡಿಕೆ ಆಧಾರಿತ ಮತ್ತು ಸಮುದಾಯ ಸಹಭಾಗಿತ್ವ ಕಾರ್ಯಕ್ರಮವಾಗಿದ್ದು, ನೈರ್ಮಲ್ಯ ಬಗ್ಗೆ ಗ್ರಾಮೀಣ ಸಮುದಾಯದಲ್ಲಿರುವ ಮೂಡನಂಬಿಕೆ, ಆಚಾರ-ವಿಚಾರಗಳನ್ನು ತೊಡೆದು ಹಾಕಿ, ಪ್ರತಿಯೊಂದು ಗ್ರಾಮದಲ್ಲೂ 'ಮನೆಗೊಂದು ಶೌಚಾಲಯ'ವನ್ನು ನಿರ್ಮಾಣ ಮಾಡಿಕೊಳ್ಳುವಂತಹ ವಾತಾವರಣವನ್ನು ನಿರ್ಮಾಣ ಮಾಡಬೇಕಾಗಿದೆ.ಈ ಉದ್ದೇಶದಿಂದ ಜಿಲ್ಲಾ ನೆರವು ಘಟಕದಲ್ಲಿ, ಮಾಹಿತಿ, ಶಿಕ್ಷಣ ಮತ್ತು ಸಂವಹನ, (IEC) ಸಾಮಾಜಿಕ ಅಭಿವೃದ್ಧಿ (SDC) ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ (HRD) ಸಮಾಲೋಚಕರನ್ನು ನೇಮಕ ಮಾಡಿಕೊಳ್ಳಲಾಗಿರುತ್ತದೆ.

ಆದಾಗ್ಯೂ ನಿರ್ಮಲ ಭಾರತ್ ಅಭಿಯಾನ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಜಿಲ್ಲೆಗಳಲ್ಲಿ ನಿಗಧಿತ ಭೌತಿಕ ಗುರಿ ಹಾಗೂ ನಿರ್ಮಲ ಗ್ರಾಮ ಪುರಸ್ಕಾರಕ್ಕಾಗಿ ಗ್ರಾಮ ಪಂಚಾಯಿತಿಗಳನ್ನು ಅಣಿಗೊಳಿಸುವಲ್ಲಿ ನಿರೀಕ್ಷಿತ ಸಾಧನೆ ಮಾಡಲು ಸಾಧ್ಯವಾಗಿಲ್ಲ. ಈ ಹಿನ್ನೆಲೆಯಲ್ಲಿ ಜಿಲ್ಲಾ ನೆರವು ಘಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಮಾಲೋಚಕರಿಗೆ ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ನೀಡಿರುವ ಭೌತಿಕ ಗುರಿ ಮತ್ತು ಸಾಧನೆಯ ಮಾಹಿತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ದಿನಾಂಕ:31-10-2013ರ ಒಳಗಾಗಿ ರಾಜ್ಯ ಕಚೇರಿಗೆ ಸಲ್ಲಿಸಲು ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ
Veeranagappa
ಮಿಷನ್ ನಿರ್ದೇಶಕರ ಪರವಾಗಿ
ರಾಜ್ಯ ನೀರು & ನೈರ್ಮಲ್ಯ ಮಿಷನ್
ಗ್ರಾಮೀಣಾಭಿವೃದ್ಧಿ & ಪಂಚಾಯತ್ ರಾಜ್ ಇಲಾಖೆ

**ಪ್ರತಿಗಳು:**

1. ಪ್ರಧಾನ ಕಾರ್ಯದಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಆಪ್ತ ಕಾರ್ಯದರ್ಶಿಯವರ ಮಾಹಿತಿಗಾಗಿ.

2ನೇ ಮಹಡಿ, ಕೆ.ಹೆಚ್.ಬಿ. ಬಿಲ್ಡಿಂಗ್, ಕಾವೇರಿಭವನ, ಬೆಂಗಳೂರು - 560 009.
ದೂರವಾಣಿ ಸಂ.22221861-62 : - ಫ್ಯಾಕ್ಸ್ :-2222186 E-mail : wsrdpr@gmail.com.

ಜಿಲ್ಲಾ ಪಂಚಾಯತ್.................

ನಿರ್ಮಲ ಭಾರತ್ ಅಭಿಯಾನ ಕಾರ್ಯಕ್ರಮ

ಜಿಲ್ಲಾ ಸಮಾಲೋಚಕರಿಗೆ ಪ್ರಸಕ್ತ ಸಾಲಿನಲ್ಲಿ ನಿಗಧಿಪಡಿಸಿರುವ ಭೌತಿಕ ಗುರಿ,ಸಾಧನೆ ಮಾಹಿತಿಯ ನಮೂನೆ.

| ಕ್ರ.ಸಂ | ಸಮಾಲೋಚಕರ ವಿವರ | ಜಿಲ್ಲಾ ಸಮಾಲೋಚಕರ ಹೆಸರು | ಜಿಲ್ಲೆಯಲ್ಲಿ ನೀಡಿರುವ ಭೌತಿಕ ಗುರಿ. | ಇಲ್ಲಿಯವರೆಗೆ ಸಾಧಿಸಿರುವ ಭೌತಿಕ ಗುರಿ. |
|---|---|---|---|---|
| 1 | ಮಾಹಿತಿ, ಶಿಕ್ಷಣ ಮತ್ತು ಸಂವಹನ, (IEC) ಸಮಾಲೋಚಕರು. | | | |
| 2 | ಸಾಮಾಜಿಕ ಅಭಿವೃದ್ಧಿ (SDC) ಸಮಾಲೋಚಕರು | | | |
| 3 | ಮಾನವ ಸಂಪನ್ಮೂಲ ಅಭಿವೃದ್ಧಿ (HRD) ಸಮಾಲೋಚಕರು | | | |

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ಜಿಲ್ಲಾ ಪಂಚಾಯತ್.................................